

## ಸೃಜನಶೀಲ ತೇಜಸ್ವಿ ಪ್ರತಿಷ್ಠಾನ

ಚಿಕ್ಕಮಗಳೂರಿನ ಕೊಟ್ಟಿಗೆಹಾರದಲ್ಲಿರುವ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನದ ಸೃಜನಶೀಲತೆ ನೋಡುಗರ ಗಮನಸೆಳೆಯುತ್ತದೆ. ನಿಸರ್ಗದ ಜೊತೆ ಬಾಳಿದ ತೇಜಸ್ವಿ ಅವರ ಬದುಕನ್ನು ಇಲ್ಲಿ ಕಟ್ಟಿ ಕೊಟ್ಟ ಪರಿ ಗಮನ ಸೆಳೆಯುತ್ತದೆ. ಪ್ರತಿಷ್ಠಾನದ ಮುಂಭಾಗದಲ್ಲಿನ ಕಾಫಿ ಬೀಜದ ಕಲಾಕೃತಿ ನೋಡುಗರನ್ನು ಸೆಳೆಯುತ್ತದೆ. ಕಾಫಿ ಬೀಜದ ಕಲಾಕೃತಿ ವೀಕ್ಷಕರನ್ನು ಮಲೆನಾಡಿಗೆ ಸ್ವಾಗತಬಯಸುವಂತಿದೆ. ತೇಜಸ್ವಿ ಅವರ ಕರ್ವಾಲೋ ಕಾದಂಬರಿಯಲ್ಲಿ ಬರುವ ಹಾರುವ ಓತಿಕ್ಯಾತ ಹೊಸ ಲೋಕ ತೆರೆಯುತ್ತದೆ. ವಿವಿಧ ಕೀಟಗಳ ಬಗ್ಗೆ ಮಾಹಿತಿ, ಹಳೆಯ ಕ್ಯಾಮೆರಾ ಒಳಗೊಂಡಂತೆ ಅನೇಕ ವಸ್ತುಗಳ ಸಂಗ್ರಹ ಬೇರೆ ಲೋಕಕ್ಕೆ ಕರೆದೊಯ್ಯುತ್ತದೆ. ಇಲ್ಲಿ ತೇಜಸ್ವಿ ಅವರ ಕೃತಿಗಳನ್ನು ಹಸಿರು ಪರಿಸರದ ನಡುವೆ ಇರುವ ಗಾಜಿನ ಮನೆಯಲ್ಲಿ ಕೂತು ಓದಬಹುದು. ತೇಜಸ್ವಿ ಅವರು ಓಡಾಡುತ್ತಿದ್ದ ಸ್ಕೂಟರ್‌ನ ಮಾದರಿ ಇಲ್ಲಿದೆ. ವರ್ಷದ ಎಲ್ಲಾ ದಿನ ಬೆಳಗ್ಗೆ 10.30ರಿಂದ ಸಂಜೆ 5.30ರವರೆಗೆ ಸಾಹಿತ್ಯಾಸಕ್ತರಿಗೆ ಉಚಿತವಾಗಿ ತೆರೆದಿರುವ ಪ್ರತಿಷ್ಠಾನದ ಸೃಜನಶೀಲತೆ ತೇಜಸ್ವಿಯವರ ಬದುಕಿನ ಪಡಿಯಚ್ಚಿನಂತೆ ರೂಪಿತವಾಗಿದೆ. ಆಸಕ್ತರು ಇಲ್ಲಿ ಭೇಟಿ ನೀಡಿ ತೇಜಸ್ವಿ ಅವರ ಬದುಕನ್ನು ಅರಿಯುವ ಯತ್ನ ಮಾಡಬಹುದಾಗಿದೆ.

–ಅರುಣ್ ಕಿಲ್ಲೂರು





## ವಿಷಕಾರಿ ಟೋಡ್ಸ್

ಕರಿಬೇವಿನ ಗಿಡಕ್ಕೆ ಪಾತಿ ಮಾಡಲು ಸುತ್ತಲೂ ಇಟ್ಟಿದ್ದ ಇಟ್ಟಿಗೆ ಸರಿಸಿದೆ. ನೀರು ಹರಿದು ತಂಪಿದ್ದ ಸ್ಥಳದಲ್ಲಿದ್ದ ಇಟ್ಟಿಗೆಯ ಕೆಳಗೆ ಕೆಸರಿನಲ್ಲಿ ಹೂತಂತೆ ಕುಳಿತುಕೊಂಡಿತ್ತು ಚಿತ್ರದಲ್ಲಿ ಕಾಣುತ್ತಿರುವ ಈ ಟೋಡ್. ಕೆಸರು ಹಾಗೂ ಇಟ್ಟಿಗೆಯ ಬಣ್ಣ ಹೊಂದಿರುವ ಇದು ಆಕರ್ಷಕವಾಗಿತ್ತು. ಈ ಟೋಡ್ಸ್ ವಿಷಕಾರಿ ಕಪ್ಪೆಗಳ ವರ್ಗಕ್ಕೆ ಸೇರಿತ್ತು. ಇವುಗಳಿಗೆ ಕೀಟಗಳೇ ಆಹಾರ. ಹೀಗಾಗಿ, ಉದ್ಯಾನ, ತರಕಾರಿ ತೋಟ, ಹೊಲಗಳು, ಹುಲ್ಲುಗಾವಲುಗಳಲ್ಲಿ ಇವುಗಳನ್ನು ಹೆಚ್ಚಾಗಿ ನೋಡಬಹುದು. ಮಾರಕ ವಿಷ ಹೊಂದಿರುವ ಟೋಡ್‌ಗಳು ಅಗಲವಾದ ದುಂಡುಮುಖ, ದೊಡ್ಡ ಕಣ್ಣು, ದುಂಡಗಿನ ಸಣ್ಣದೇಹ ಮತ್ತು ಸಣ್ಣ ಕಾಲುಗಳನ್ನು ಹೊಂದಿದ್ದು, ಬೂದು, ಹಸಿರು ಹಾಗೂ ಕಂದು ಬಣ್ಣದಲ್ಲಿರುತ್ತವೆ. ಇದರ ಚರ್ಮವು ಒರಟಾಗಿದ್ದು, ಅದರ ಮೇಲೆಲ್ಲ ಗುಪ್ಪೆಗಳಿದ್ದು, ಅವುಗಳಲ್ಲಿ ವಿಷವನ್ನು ಸ್ರವಿಸುತ್ತವೆ. ಇವುಗಳಲ್ಲಿ 5000ಕ್ಕೂ ಹೆಚ್ಚು ಜಾತಿಗಳಿವೆ. ಟೋಡ್‌ನ ವೈಜ್ಞಾನಿಕ ಹೆಸರು ‘ಬುಫೋನಿಡೆ’ ಎಂದಿದ್ದು, ಹೆಣ್ಣು 14 ಸೆ.ಮೀ. ಗಂಡು 10 ಸೆ.ಮೀ. ಉದ್ದವಿರುತ್ತದೆ. ಇವುಗಳು ನೀರಿನ ಸಮೀಪ ಆರ್ದ್ರ ವಾತಾವರಣದಲ್ಲಿರುತ್ತದೆ.

–ಸೀತಾ ಎಸ್. ನಾರಾಯಣ, ಹರಿಹರ

## ಜಾನುವಾರುಗಳ ಅಪರೂಪದ ವಸ್ತುಗಳು

ರೈತರ ಉಪಕಸುಬು ಎನಿಸಿದ್ದ ‘ದನಸಾಕಣೆ’ಯು ಇಂದು ಹಲವು ಕಾರಣಗಳಿಂದ ಮೊದಲಿದ್ದ ಉತ್ಸಾಹ ಕಳೆದುಕೊಂಡಿದೆ. ಹಳ್ಳಿಯ ದನದ ಕೊಟ್ಟಿಗೆಯಲ್ಲಿ ದನಸಾಕಣೆಯ ಅಂದಿನ ಸಾಂಪ್ರದಾಯಿಕ ಪದ್ಧತಿ, ವಿಶೇಷ ದಿನಗಳಲ್ಲಿ ದನಕರುಗಳಿಗೆ ಮಾಡುತ್ತಿದ್ದ ಅಲಂಕಾರವೂ ಈಗಿಲ್ಲವಾಗಿದೆ. ಅಂದಿನ ಕೊಟ್ಟಿಗೆ ಮನೆಗಳು ನಾಡ ಹಸುಗಳು ಇಲ್ಲದೆ ಖಾಲಿತನ ಅನುಭವಿಸುತ್ತಿವೆ.

ದೀಪಾವಳಿ, ಸಂಕ್ರಾಂತಿ ಮೊದಲಾದ ಹಬ್ಬಗಳಲ್ಲಿ ದನಗಳಿಗೂ ವಿಶೇಷವಾಗಿ ಅಲಂಕಾರ ಮಾಡುತ್ತಿದ್ದುದು ಹಬ್ಬದ ಆಚರಣೆಯ ಒಂದು ಭಾಗವೇ ಆಗಿತ್ತು. ಆಕಳು, ಎತ್ತುಗಳ ಕೊರಳಿಗೆ ದೊಡ್ಡದಾದ ಗಂಟೆ ಕಟ್ಟುವುದು, ಮೂಗುದಾರ, ಮಕಂಡ, ಡಾಬು, ಗುಮರಿ, ದನದ ಕೋಡಿಗೆ ಹಾಕುವ ಹಗ್ಗ, ಹೀಗೆ ನಿರ್ದಿಷ್ಟ ಉದ್ದೇಶಕ್ಕಾಗೇ ಮಾಡಿಸಿ ತಂದ ಹಲವಾರು ನಮೂನೆಯ ನಾರಿನ ಹಗ್ಗಗಳು ಈಗ ಮೂಲೆಗುಂಪಾಗಿವೆ.

ಬಲಿಷ್ಠವಾದ ಹೋರಿಯನ್ನು ಸಣ್ಣದೊಂದು ನಾರಿನ ಹಗ್ಗವೂ ನಿಯಂತ್ರಿಸುತ್ತಿತ್ತು. ಅಂತಹ ದನದ ಸಾಮಗ್ರಿಗಳು ಈಗಿನ ಕಾಲಕ್ಕೆ ಅದರ ಮಹತ್ವ ಕಳೆದುಕೊಂಡು ಕೊಟ್ಟಿಗೆ ಮನೆಯ ಅಟ್ಟ ಸೇರಿದ್ದು ಕಾಲದ ಬದಲಾವಣೆ ಎನ್ನಬಹುದು. ಅನೇಕ ಹಳ್ಳಿಗಳಲ್ಲಿ ಕೃಷಿಕರ ಮಕ್ಕಳು, ಯುವಕರು ಉದ್ಯೋಗ ಅರಸಿ ಪಟ್ಟಣ ಸೇರಿದ್ದು, ದನಸಾಕಣೆ ಲಾಭದಾಯಕವಲ್ಲ ಎನಿಸಿದ್ದು ಸೇರಿದಂತೆ ಹೀಗೆ ಅನೇಕ ಕಾರಣಗಳು ದನಕರುಗಳ ವಸ್ತುಗಳು ಅಪರೂಪವಾಗಲು ಕಾರಣವಾಗಿದೆ.

–ಜಿ.ಎಂ. ಬೊಮ್ನಳ್ಳಿ, ಶಿರಸಿ

